**ಕಾರ್ಮಿಕ ನ್ಯಾಯಾಲಯ, ಮೈಸೂರು.**

**Ref No.**: 20/2024

ಡಬ್ಲ್ಯೂ ಡಬ್ಲ್ಯೂ-1

**ದಿನಾಂಕ 12.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಜೆ.ಪಿ. ವಕೀಲರಿಂದಃ**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 2011 ರಲ್ಲಿ ಅರಮನೆಗೆ ಸೇರಿಕೊಂಡಿದ್ದೆ. ನನ್ನ ಸಂಬಂಧಿಕರೊಬ್ಬರು ಅಲ್ಲಿ ಕೆಲಸ ಮಾಡುತ್ತಿದ್ದರು, ಅವರ ಮೂಲಕ ನಾನು ಅರಮನೆಗೆ ಸೇರಿಕೊಂಡಿದ್ದೆ. ನನ್ನ ಸಂಬಂಧಿಕರು ಆನೆಯನ್ನು ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದರು. ಕಾರ್ಮಿಕ ಇಲಾಖೆಯ ಮುಂದೆ ನನ್ನ ಕೆಲಸ ನಿರಾಕರಿಸಿರುವುದರ ಬಗ್ಗೆ ನಾನು ನೀಡಿದ್ದ ಅರ್ಜಿಯ ಪ್ರತಿ ನ್ಯಾಯಾಲಯದ ಮುಂದೆ ಇರುವುದಿಲ್ಲ. ನನ್ನ ಪ್ರಕಾರ ದಿನಾಂಕ 06.02.2022 ರಂದು ನನ್ನ ಕೆಲಸವನ್ನು ನಿರಾಕರಿಸಿರುತ್ತಾರೆ. ನಾನು ಕಾರ್ಮಿಕ ಇಲಾಖೆಗೆ 2013 ನೇ ಇಸವಿಯಲ್ಲಿ ಹೋಗಿದ್ದೇನೆ. ಅದರ ದಿನಾಂಕ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ನನಗೆ ಗೊಂದಲ ಮಾಡಿಕೊಂಡು ಕಾರ್ಮಿಕ ಇಲಾಖೆಗೆ ಹೋದ ದಿನಾಂಕವನ್ನು ತಪ್ಪಾಗಿ ಹೇಳಿರುತ್ತೇನೆ ಎನ್ನುತ್ತಾರೆ.

ಕಾರ್ಮಿಕ ಇಲಾಖೆಗೆ ನಾನೊಬ್ಬನೇ ಹೋಗಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸಾಕ್ಷಿ ಸಂಘದ ಮೂಲಕ ಹೋಗಿದ್ದೆ ಎನ್ನುತ್ತಾರೆ. ಸಂಘದ ಮೂಲಕ ಅರ್ಜಿ ಸಲ್ಲಿಸಿರುವುದಕ್ಕೆ ಏನಾದರೂ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿ ಕಡತವನ್ನು ನೋಡಿ ಅದರಲ್ಲಿ ಆ ರೀತಿ ದಾಖಲೆ ಇರುವುದಿಲ್ಲ ಎನ್ನುತ್ತಾರೆ. ನಾನು ರಾಮು ಎನ್ನುವವರಿದ್ದ ಸಂಘಕ್ಕೆ ಸೇರಿಕೊಂಡಿದ್ದೆ, ಸದರಿ ಸಂಘದ ಹೆಸರು ಆರ್.ಬಿ.ಐ. ಆಗಿರುತ್ತದೆ. ಕೆಲಸದಿಂದ ತೆಗೆದು ಹಾಕಿದ್ದ ಕಾರಣ ಸದರಿ ಸಂಘದಲ್ಲಿ ನಾನು ಸದಸ್ಯತ್ವ ಪಡೆದಿದ್ದೆ. ಸದಸ್ಯತ್ವ ಪಡೆಯುವಾಗ ರೂ.25/- ಹಣವನ್ನು ಪ್ರತಿ ತಿಂಗಳು ನೀಡುತ್ತಿದ್ದೆ. ಸದರಿ ಸಂಘದ ಬೈಲಾ ಹಾಗೂ ಸದಸ್ಯತ್ವ ವಂತಿಗೆ ನೀಡಿದ್ದ ಬಗ್ಗೆ

ರಶೀದಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಇವತ್ತಿಗೂ ಸಹ ನಾನು ವಂತಿಗೆಯನ್ನು ನೀಡುತ್ತಿದ್ದೇನೆ ಹಾಗೂ ಆ ಬಗ್ಗೆ ರಶೀದಿಗಳು ನನ್ನ ಬಳಿ ಇರುತ್ತವೆ. ನನ್ನ ಜೊತೆಗೆ Regency Stud Farm ನಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಕೆಲಸಗಾರರು ಸಂಘದಲ್ಲಿ ಸದಸ್ಯತ್ವ ಪಡೆದಿರುತ್ತಾರೆ. ಒಟ್ಟು 16 ಜನ ಕೆಲಸಗಾರರು ಸದಸ್ಯತ್ವ ಪಡೆದಿದ್ದರು. ಅವರ ಹೆಸರು ಹೇಳಬಹುದು. ಅವರುಗಳೆಂದರೆ ನಾನು, ರೇವಣ್ಣ, ಪುಟ್ಟ, ದಸ್ತಗೀರ್ ಪಾಷಾ, ಅನ್ಸರ ಪಾಷಾ, ಸಾದೀಖ್ ಪಾಷಾ, ಅಶ್ರಫ ಶರೀಫ್, ಎಲ್. ಮಂಜ, ಸೋಮ, ಚಂದ್ರ, ರಮೇಶ, ಸನ್ಮದಾ, ಲೊಕೇಶ, ವೆಂಕಟ ಎನ್ನುವವರು ಪಡೆದಿರುತ್ತಾರೆ. ಸಾಕ್ಷಿ ಮುಂದುವರೆದು 14 ಜನ ಕೆಲಸಗಾರರು ಸದಸ್ಯತ್ವ ಪಡೆದಿದ್ದರು ಎನ್ನುತ್ತಾರೆ.

ಸದರಿ ಸದಸ್ಯತ್ವ ಪಡೆದಿದ್ದ ಬಗ್ಗೆ ಅರ್ಜಿಯನ್ನು ಸಂಘಕ್ಕೆ ನೀಡಿರುತ್ತೇವೆ. ಆ ಬಗ್ಗೆ ನ್ಯಾಯಾಲಯಕ್ಕೆ ಪ್ರತಿಯನ್ನು ಸಲ್ಲಿಸುತ್ತೇನೆ. ನಾನು ಹಾಗೂ ಇತರರು ಸದಸ್ಯತ್ವ ಪಡೆದಿದ್ದ ಬಗ್ಗೆ ಸದಸ್ಯತ್ವದ ದಾಖಲೆಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳನ್ನು ನಿ.ಎಂ.1 ರಿಂದ 7 ಎಂದು ಗುರುತಿಸಲಾಯಿತು. ನನ್ನ ನೋಂದಣಿ ದಾಖಲೆಯಲ್ಲಿ ನಾವು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದೆವು ಎನ್ನುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. Stud Farm ಎಂದರೆ ಕುದುರೆಗಳನ್ನು ಮರಿ ಮಾಡಿ ಸಾಕುವ ಜಾಗ ಎಂದರೆ ಸರಿ. ನಾನು ಮಾವುತನಾಗಿ ಆನೆ ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದೆ ಎಂದರೆ ಸರಿ.

ಅರಮನೆಯಲ್ಲಿ Regency Stud Farm ಎನ್ನುವ ಸಂಸ್ಥೆ ಇಲ್ಲ ಎಂದರೆ ಇರುತ್ತದೆ ಎನ್ನುತ್ತಾರೆ. ಆ ರೀತಿ ಸಂಸ್ಥೆ ಇದೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಕರಾರು ಪತ್ರವನ್ನು ಹಾಜರು ಮಾಡಿರುತ್ತೇನೆ ಎನ್ನುತ್ತಾರೆ. ನಿ.ಡಬ್ಲೂ–2 ರ ದಾಖಲೆಯಲ್ಲಿ ಆಡಳಿತ ವರ್ಗ ಶ್ರೀಕಂಠದತ್ತ ನರಸಿಂಹರಾಜ್ ಒಡೆಯರ್ ಎಂದು ನಮೂದು ಇರುತ್ತದೆ ಎಂದರೆ ಸರಿ. ಆಡಳಿತ ವರ್ಗ ಅರಮನೆ ಎಂದು ನಮೂದು ಇರುತ್ತದೆ. ಸದರಿ

ಒಪ್ಪಂದವು ಮೈಸೂರು ಜಿಲ್ಲಾ ಮಜ್ದೂರ್ ಸಂಘದವರ ಹೆಸರಿನಲ್ಲಿ ಆಗಿರುತ್ತದೆ ಎಂದರೆ ಸರಿ. ನಾನು ಸದರಿ ಮೈಸೂರು ಜಿಲ್ಲಾ ಮಜ್ದೂರ್ ಸಂಘದ ಸದಸ್ಯ ಎಂದು ತೋರಿಸುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಸದರಿ ಒಪ್ಪಂದದಲ್ಲಿ ನನ್ನ ಸಹಿ ಇರುವುದಿಲ್ಲ. ಸದರಿ ಸಂಘಕ್ಕೆ ನಾನು ಯಾವುದೇ ರಾಜೀನಾಮೆ ಸಲ್ಲಿಸಿಲ್ಲ. ಸದರಿ ಸಂಘದಲ್ಲಿ ಈಗ ನಾನು ಸದಸ್ಯನಾಗಿರು ವುದಿಲ್ಲ. ಸದರಿ ಒಪ್ಪಂದದಲ್ಲಿ ಸದಸ್ಯರು ಯಾರು, ಯಾವ ಕಾರಣಕ್ಕೆ ಮಾಡಿಕೊಂಡಿರುತ್ತೇವೆ ಎನ್ನುವ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಸದರಿ ಒಪ್ಪಂದ ನಿಂತುಹೋಗಿರುತ್ತದೆ ಎನ್ನುತ್ತಾರೆ. ಸದರಿ ಒಪ್ಪಂದ ನಿಂತಿಲ್ಲ ಅದನ್ನು ಮಾಡಿಕೊಂಡಿರುವುದೇ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಬ್ಲೂ.1ರ ದಾಖಲೆಯನ್ನು ಮೈಸೂರು ಅರಮನೆಯ ಕಚೇರಿಯಿಂದ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ Regency Stud Farm ಹೆಸರು ಇರುವುದಿಲ್ಲ ಎಂದರೆ ಸರಿ.

2020ರಲ್ಲಿ ಕೊವೀಡ್ ಹಿನ್ನೆಲೆಯಲ್ಲಿ ಜನರು ಸರಾಗವಾಗಿ ಓಡಾಡಲು ಅವಕಾಶ ಇರಲಿಲ್ಲ, ಅದ್ದರಿಂದ ಗುರುತಿನ ಚೀಟಿಯನ್ನು ಕೊಟ್ಟಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ಆ ರೀತಿ ಗುರುತಿನ ಚೀಟಿಯನ್ನು ಅರಮನೆಯ ಆನೆಯನ್ನು ನೋಡಿಕೊಳ್ಳಲು ನಾನು ಬರುವ ಸಂಬಂಧ ನನಗೆ ನೀಡಿದ್ದರು ಎಂದರೆ ಸರಿಯಲ್ಲ. ಅರಮನೆಯಲ್ಲಿ ರಾಜವಂಶಸ್ಥರು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಯಾವುದೇ ಮನೆಯಲ್ಲಿ ನಾಯಿ, ಹಸು, ಬಟ್ಟೆ ಒಗೆಯಲು, ಅಡುಗೆ ಮಾಡಲು ಜನಗಳನ್ನು ನೇಮಕ ಮಾಡಿಕೊಳ್ಳುತ್ತಾರೆ ಎಂದರೆ ಸರಿ.

ಅರಮನೆಯಲ್ಲಿ ರಾಜ ವಂಶಸ್ಥರು ಇರುವುದರಿಂದ ಅಲ್ಲಿ ಆನೆ, ಒಂಟೆ, ಕುದುರೆ, ಹಸು, ನಾಯಿ ಮುಂತಾದ ಪ್ರಾಣಿಗಳನ್ನು ಸಾಕುತ್ತಿದ್ದಾರೆ ಎಂದರೆ ಸರಿ. ರಾಜವಂಶಸ್ಥರು ಸ್ವಾತಂತ್ರ್ಯ ಸಿಗುವುದಕ್ಕಿಂತ ಮುಂಚೆ ಮೈಸೂರು ರಾಜ್ಯವನ್ನು ಆಳುತ್ತಿದ್ದರು ಎಂದರೆ ಸರಿ. ನನಗೆ ತಿಳಿದಿರುವಂತೆ ಮೈಸೂರು ದಸರಾ ಆಚರಣೆಯನ್ನು ವಿಜಯನಗರದ ಅರಸು ಪ್ರಾರಂಭ ಮಾಡಿ ಈಗಲೂ ಸಹ ಅದನ್ನು ಒಡೆಯರ್ ವಂಶಸ್ಥರು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ.

ಮೈಸೂರು ರಾಜ್ಯ ಪ್ರತ್ಯೇಕಗೊಂಡ ನಂತರ ಸರ್ಕಾರವು ದಸರಾವನ್ನು ರಾಜವಂಶಸ್ಥರ ಸಹಯೋಗ ದಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ದಸರಾ ಮೆರವಣಿಗೆಯಲ್ಲಿ ಆನೆ, ಕುದುರೆ, ಒಂಟೆಗಳು ಭಾಗವಹಿಸುತ್ತವೆ ಎಂದರೆ ಸರಿ. ಅರಮನೆಯಲ್ಲಿ ಈಗ ಎರಡು ಆನೆಗಳು, ಎರಡು ಒಂಟೆಗಳು, ಎರಡು ಕುದುರೆಗಳು ಇರುತ್ತವೆ. ಸರ್ಕಾರ ದಸರಾ ಹಬ್ಬವನ್ನು ನಾಡಹಬ್ಬ ಎಂದು ಪ್ರಾರಂಭ ಮಾಡಿದ ನಂತರ ಅರಮನೆ ವಂಶಸ್ಥರು ನವರಾತ್ರಿ ಸಮಯದಲ್ಲಿ ಖಾಸಗಿ ದರ್ಬಾರ ಮೆರವಣಿಗೆಯನ್ನು ಅರಮನೆ ಒಳಗೆ ಮಾಡುತ್ತಾರೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**

# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref No.**: 20/2024

ಡಬ್ಲ್ಯೂ. ಡಬ್ಲ್ಯೂ-2

**<u>ದಿನಾಂಕ 12.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಜೆ.ಪಿ. ವಕೀಲರಿಂದಃ**

ನಾನು 10 ನೇ ತರಗತಿ ಅನುತ್ತೀರ್ಣನಾಗಿರುತ್ತೇನೆ. 2002 ರಲ್ಲಿ ಅರಮನೆಗೆ ಪುಟ್ಟ ಎನ್ನುವವರ ಮೂಲಕ ನಾನು ಸೇರಿಕೊಂಡಿದ್ದೆ. ಸದರಿ ಪುಟ್ಟ ಎನ್ನುವವರು ನನ್ನ ಸೋದರಮಾವ ಆಗಿರುತ್ತಾರೆ. ನಾನು ಅಲ್ಲ ಒಂಟೆ ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದೆ. ಕಾರ್ಮಿಕ ಇಲಾಖೆಯ ಮುಂದೆ ನನ್ನ ಕೆಲಸ ನಿರಾಕರಿಸಿರುವುದರ ಬಗ್ಗೆ ನಾನು ನೀಡಿದ್ದ ಅರ್ಜಿಯ ಪ್ರತಿ ನ್ಯಾಯಾಲಯದ ಮುಂದೆ ಇರುವುದಿಲ್ಲ. ನನ್ನ ಪ್ರಕಾರ ದಿನಾಂಕ 01.07.2021 ರಂದು ನನ್ನ ಕೆಲಸವನ್ನು ನಿರಾಕರಿಸಿರುತ್ತಾರೆ. ನಾನು ಕಾರ್ಮಿಕ ಇಲಾಖೆಗೆ 2023 ನೇ ಇಸವಿಯಲ್ಲಿ ಹೋಗಿದ್ದೇನೆ.

ಕಾರ್ಮಿಕ ಇಲಾಖೆಗೆ ನಾನೊಬ್ಬನೇ ಹೋಗಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸಾಕ್ಷಿ ಸಂಘದ ಮೂಲಕ ಹೋಗಿದ್ದೆ ಎನ್ನುತ್ತಾರೆ. ಸಂಘದ ಮೂಲಕ ಅರ್ಜಿ ಸಲ್ಲಿಸಿರುವುದಕ್ಕೆ ಏನಾದರೂ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿ ಕಡತವನ್ನು ನೋಡಿ ಅದರಲ್ಲಿ ಆ ರೀತಿ ದಾಖಲೆ ಇರುವುದಿಲ್ಲ ಎನ್ನುತ್ತಾರೆ. ನಾನು ರಾಮು ಎನ್ನುವವರಿದ್ದ ಸಂಘಕ್ಕೆ ಸೇರಿಕೊಂಡಿದ್ದೆ, ಸದರಿ ಸಂಘದ ಹೆಸರು ಆರ್.ಬಿ.ಐ. ಆಗಿರುತ್ತದೆ. ಕೆಲಸದಿಂದ ತೆಗೆದು ಹಾಕಿದ್ದ ಕಾರಣ ಸದರಿ ಸಂಘದಲ್ಲಿ ನಾನು ಸದಸ್ಯತ್ವ ಪಡೆದಿದ್ದೆ. ಸದಸ್ಯತ್ವ ಪಡೆಯುವಾಗ ರೂ.25/- ಹಣವನ್ನು ಪ್ರತಿ ತಿಂಗಳು ನೀಡುತ್ತಿದ್ದೆ. ಸದರಿ ಸಂಘದ ಬೈಲಾ ಹಾಗೂ ಸದಸ್ಯತ್ವ ವಂತಿಗೆ ನೀಡಿದ್ದ ಬಗ್ಗೆ ರಶೀದಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಇವತ್ತಿಗೂ ಸಹ ನಾನು ವಂತಿಗೆಯನ್ನು ನೀಡುತ್ತಿದ್ದೇನೆ ಹಾಗೂ ಆ ಬಗ್ಗೆ ರಶೀದಿಗಳು ನನ್ನ ಬಳಿ ಇರುತ್ತವೆ. ನನ್ನ ಜೊತೆಗೆ Regency Stud Farm ನಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಕೆಲಸಗಾರರು ಸಂಘದಲ್ಲಿ ಸದಸ್ಯತ್ವ

ಪಡೆದಿರುತ್ತಾರೆ. ಒಟ್ಟು 16 ಜನ ಕೆಲಸಗಾರರು ಸದಸ್ಯತ್ವ ಪಡೆದಿದ್ದರು. ಅವರ ಹೆಸರು ಹೇಳಬಹುದು. ಅವರುಗಳೆಂದರೆ ನಾನು, ಅಫ್ಜಲ್ ಪಾಷಾ, ಪುಟ್ಟ, ದಸ್ತಗೀರ್ ಪಾಷಾ, ಅನ್ಸರ ಪಾಷಾ, ಸಾದೀಖ್ ಪಾಷಾ, ಅಶ್ರಫ ಶರೀಫ್, ಎಲ್. ಮಂಜ, ಸೋಮ, ಚಂದ್ರ, ರಮೇಶ, ಸನ್ಮದಾ, ಲೊಕೇಶ, ವೆಂಕಟ ಎನ್ನುವವರು ಪಡೆದಿರುತ್ತಾರೆ. ಸಾಕ್ಷಿ ಮುಂದುವರೆದು 14 ಜನ ಕೆಲಸಗಾರರು ಸದಸ್ಯತ್ವ ಪಡೆದಿದ್ದರು ಎನ್ನುತ್ತಾರೆ.

ಸದರಿ ಸದಸ್ಯತ್ವ ಪಡೆದಿದ್ದ ಬಗ್ಗೆ ಅರ್ಜಿಯನ್ನು ಸಂಘಕ್ಕೆ ನೀಡಿರುತ್ತೇವೆ. ಆ ಬಗ್ಗೆ ನ್ಯಾಯಾಲಯಕ್ಕೆ ಪ್ರತಿಯನ್ನು ಸಲ್ಲಿಸುತ್ತೇನೆ. ನಾನು ಹಾಗೂ ಇತರರು ಸದಸ್ಯತ್ವ ಪಡೆದಿದ್ದ ಬಗ್ಗೆ ಸದಸ್ಯತ್ವದ ದಾಖಲೆಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ನಿ.ಎಂ.1 ರಿಂದ 7 ರಲ್ಲಿ ಇರುತ್ತವೆ. ನನ್ನ ನೋಂದಣಿ ದಾಖಲೆಯಲ್ಲಿ ನಾವು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದೆವು ಎನ್ನುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. Stud Farm ಎಂದರೆ ಕುದುರೆಗಳನ್ನು ಮರಿ ಮಾಡಿ ಸಾಕುವ ಜಾಗ ಎಂದರೆ ಸರಿ. ನಾನು ಮಾವುತನಾಗಿ ಆನೆ ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದೆ ಎಂದರೆ ಸರಿ.

ಅರಮನೆಯಲ್ಲಿ Regency Stud Farm ಎನ್ನುವ ಸಂಸ್ಥೆ ಇಲ್ಲ ಎಂದರೆ ಇರುತ್ತದೆ ಎನ್ನುತ್ತಾರೆ. ಆ ರೀತಿ ಸಂಸ್ಥೆ ಇದೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಕರಾರು ಪತ್ರವನ್ನು ಹಾಜರು ಮಾಡಿರುತ್ತೇನೆ ಎನ್ನುತ್ತಾರೆ. ನಿ.ಡಬ್ಲೂ–2 ರ ದಾಖಲೆಯಲ್ಲಿ ಆಡಳಿತ ವರ್ಗ ಶ್ರೀಕಂಠದತ್ತ ನರಸಿಂಹರಾಜ್ ಒಡೆಯರ್ ಎಂದು ನಮೂದು ಇರುತ್ತದೆ ಎಂದರೆ ಸರಿ. ಆಡಳಿತ ವರ್ಗ ಅರಮನೆ ಎಂದು ನಮೂದು ಇರುತ್ತದೆ. ಸದರಿ ಒಪ್ಪಂದವು ಮೈಸೂರು ಜಿಲ್ಲಾ ಮಜ್ದೂರ್ ಸಂಘದವರ ಹೆಸರಿನಲ್ಲಿ ಆಗಿರುತ್ತದೆ ಎಂದರೆ ಸರಿ. ನಾನು ಸದರಿ ಮೈಸೂರು ಜಿಲ್ಲಾ ಮಜ್ದೂರ್ ಸಂಘದ ಸದಸ್ಯ ಎಂದು ತೋರಿಸುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ಸದರಿ ಒಪ್ಪಂದದಲ್ಲಿ ನನ್ನ ಸಹಿ ಇರುವುದಿಲ್ಲ. ಸದರಿ ಸಂಘಕ್ಕೆ ನಾನು ಯಾವುದೇ

ರಾಜೀನಾಮೆ ಸಲ್ಲಿಸಿಲ್ಲ. ಸದರಿ ಸಂಘದಲ್ಲಿ ಈಗ ನಾನು ಸದಸ್ಯನಾಗಿರು ವುದಿಲ್ಲ. ಸದರಿ ಒಪ್ಪಂದದಲ್ಲಿ ಸದಸ್ಯರು ಯಾರು, ಯಾವ ಕಾರಣಕ್ಕೆ ಮಾಡಿಕೊಂಡಿರುತ್ತೇವೆ ಎನ್ನುವ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಸದರಿ ಒಪ್ಪಂದ ನಿಂತುಹೋಗಿರುತ್ತದೆ ಎನ್ನುತ್ತಾರೆ. ಸದರಿ ಒಪ್ಪಂದ ನಿಂತಿಲ್ಲ ಅದನ್ನು ಮಾಡಿಕೊಂಡಿರುವುದೇ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಬ್ಲೂ.1ರ ದಾಖಲೆಯನ್ನು ಮೈಸೂರು ಅರಮನೆಯ ಕಚೇರಿಯಿಂದ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ Regency Stud Farm ಹೆಸರು ಇರುವುದಿಲ್ಲ ಎಂದರೆ ಸರಿ.

2020ರಲ್ಲಿ ಕೊವೀಡ್ ಹಿನ್ನೆಲೆಯಲ್ಲಿ ಜನರು ಸರಾಗವಾಗಿ ಓಡಾಡಲು ಅವಕಾಶ ಇರಲಿಲ್ಲ, ಅದ್ದರಿಂದ ಗುರುತಿನ ಚೀಟಿಯನ್ನು ಕೊಟ್ಟಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ಆ ರೀತಿ ಗುರುತಿನ ಚೀಟಿಯನ್ನು ಅರಮನೆಯ ಆನೆಯನ್ನು ನೋಡಿಕೊಳ್ಳಲು ನಾನು ಬರುವ ಸಂಬಂಧ ನನಗೆ ನೀಡಿದ್ದರು ಎಂದರೆ ಸರಿಯಲ್ಲ. ಅರಮನೆಯಲ್ಲಿ ರಾಜವಂಶಸ್ಥರು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಯಾವುದೇ ಮನೆಯಲ್ಲಿ ನಾಯಿ, ಹಸು, ಬಟ್ಟೆ ಒಗೆಯಲು, ಅಡುಗೆ ಮಾಡಲು ಜನಗಳನ್ನು ನೇಮಕ ಮಾಡಿಕೊಳ್ಳುತ್ತಾರೆ ಎಂದರೆ ಸರಿ.

ಅರಮನೆಯಲ್ಲಿ ರಾಜ ವಂಶಸ್ಥರು ಇರುವುದರಿಂದ ಅಲ್ಲಿ ಆನೆ, ಒಂಟೆ, ಕುದುರೆ, ಹಸು, ನಾಯಿ ಮುಂತಾದ ಪ್ರಾಣಿಗಳನ್ನು ಸಾಕುತ್ತಿದ್ದಾರೆ ಎಂದರೆ ಸರಿ. ರಾಜವಂಶಸ್ಥರು ಸ್ವಾತಂತ್ರ್ಯ ಸಿಗುವುದಕ್ಕಿಂತ ಮುಂಚೆ ಮೈಸೂರು ರಾಜ್ಯವನ್ನು ಆಳುತ್ತಿದ್ದರು ಎಂದರೆ ಸರಿ. ನನಗೆ ತಿಳಿದಿರುವಂತೆ ಮೈಸೂರು ದಸರಾ ಆಚರಣೆಯನ್ನು ವಿಜಯನಗರದ ಅರಸು ಪ್ರಾರಂಭ ಮಾಡಿ ಈಗಲೂ ಸಹ ಅದನ್ನು ಒಡೆಯರ್ ವಂಶಸ್ಥರು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ. ಮೈಸೂರು ರಾಜ್ಯ ಪ್ರತ್ಯೇಕಗೊಂಡ ನಂತರ ಸರ್ಕಾರವು ದಸರಾವನ್ನು ರಾಜವಂಶಸ್ಥರ ಸಹಯೋಗ ದಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ದಸರಾ ಮೆರವಣಿಗೆಯಲ್ಲಿ ಆನೆ, ಕುದುರೆ, ಒಂಟೆಗಳು ಭಾಗವಹಿಸುತ್ತವೆ ಎಂದರೆ ಸರಿ. ಅರಮನೆಯಲ್ಲಿ ಈಗ ಎರಡು ಆನೆಗಳು, ಎರಡು

ಒಂಟೆಗಳು, ಎರಡು ಕುದುರೆಗಳು ಇರುತ್ತವೆ. ಸರ್ಕಾರ ದಸರಾ ಹಬ್ಬವನ್ನು ನಾಡಹಬ್ಬ ಎಂದು ಪ್ರಾರಂಭ ಮಾಡಿದ ನಂತರ ಅರಮನೆ ವಂಶಸ್ಥರು ನವರಾತ್ರಿ ಸಮಯದಲ್ಲಿ ಖಾಸಗಿ ದರ್ಬಾರ ಮೆರವಣಿಗೆಯನ್ನು ಅರಮನೆ ಒಳಗೆ ಮಾಡುತ್ತಾರೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**